

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಪಾಪದ ಹಣ ಮತ್ತು ಪುಣ್ಯಕಾರ್ಯ

ಇಂಗ್ಲೆಂಡಿನಲ್ಲಿ ಒಬ್ಬ ಶ್ರೀಮಂತ ವ್ಯಕ್ತಿ ಇದ್ದ. ಅವನು 18 ವರ್ಷದ ತನ್ನ ಮಗಳ ಮೇಲೆಯೇ ಅತ್ಯಾಚಾರ ನಡೆಸಿದ ಅಪರಾಧಕ್ಕಾಗಿ ನ್ಯಾಯಾಲಯ ಶಿಕ್ಷೆ ವಿಧಿಸಿ 8 ವರ್ಷಗಳ ಕಾಲ ಜೈಲಿನಲ್ಲಿದ್ದ. ಅಂದಿನ ಈ ಭೀಭತ್ಸ ಘಟನೆಯನ್ನು ಈಗ ಮಧ್ಯವಯಸ್ಕಳಾಗಿರುವ ಅವನ ಮಗಳೇ ತನ್ನ ಪುಸ್ತಕದಲ್ಲಿ ದಾಖಲಿಸಿದ್ದಾಳೆ. ಇತ್ತೀಚೆಗೆ ಅವನು ತನ್ನ 77 ನೆಯ ವಯಸ್ಸಿನಲ್ಲಿ ತೀರಿಕೊಂಡ. ಸಾಯುವ ಮುನ್ನ ಕೋಟ್ಯಂತರ ಬೆಲೆಬಾಳುವ ತನ್ನ ಆಸ್ತಿಯಲ್ಲಿ ಸುಮಾರು ಒಂದು ಮಿಲಿಯನ್ ಪೌಂಡಿಗೂ ಹೆಚ್ಚು ಹಣವನ್ನು ಅವನು ಆ ದೇಶದ ಪ್ರಸಿದ್ಧ ಕ್ಯಾನ್ಸರ್ ಸಂಶೋಧನಾ ಸಂಸ್ಥೆಗೆ, ಉಳಿದುದನ್ನು ಇನ್ನಿತರ ಸೇವಾಸಂಸ್ಥೆಗಳಿಗೆ ಸಲ್ಲಬೇಕೆಂದು ದಾನ ಮಾಡ ಬಯಸಿ ಉಯಿಲು ಬರೆದಿಟ್ಟಿರುವುದು ವರದಿಯಾಗಿದೆ. ಅನೈತಿಕ ಜೀವನವನ್ನು ನಡೆಸಿ ಸೆರೆವಾಸ ಅನುಭವಿಸಿದ ಇಂತಹ ನೀತಿಬಾಹಿರ ನಡವಳಿಕೆಯ ವ್ಯಕ್ತಿಯು ನೀಡಿದ ಹಣವನ್ನು ಸೇವಾಸಂಸ್ಥೆಗಳು ಪಡೆಯಬಹುದೇ? ಪಾಪದ ಮೂಲದಿಂದ ಬಂದ ಹಣವನ್ನು ಒಳ್ಳೆಯ ಕಾರ್ಯಗಳಿಗೆ ಬಳಸಬಹುದೇ? ಎಂಬ ಪ್ರಶ್ನೆ ಬ್ರಿಟಿಷ್ ನಾಗರಿಕರ ನಿದ್ದೆ ಕೆಡಿಸಿದೆ. ಆಶ್ಚರ್ಯದ ಸಂಗತಿಯೆಂದರೆ ಆ ತಂದೆಯು ತನ್ನ ಮಗಳಿಗೆ ಏನೊಂದೂ ಆಸ್ತಿಯನ್ನು ಬರೆದಿಟ್ಟಿಲ್ಲ. ಇದನ್ನು ಗಮನಿಸಿದ ಕೆಲವರು ಅವನ ದಾನದ ಹಣವನ್ನು ಆ ಸೇವಾಸಂಸ್ಥೆಗಳು ತಕ್ಷಣವೇ ಪಡೆದು ಬೇರೆ ಯಾರಿಗೂ ಕೊಡದೆ ದೌರ್ಜನ್ಯಕ್ಕೆ ಒಳಗಾದ ಅವನ ಮಗಳಿಗೇ ಪೂರಾ ಹಣವನ್ನು ಪಾವತಿಸುವುದು ಸೂಕ್ತ ಎಂದು ಪ್ರತಿಕ್ರಿಯಿಸಿದ್ದಾರೆ. ಇದನ್ನು ಒಪ್ಪದ ಕೆಲವರು ಅವನು ಮಾಡಿದ ಘೋರ ಅಪರಾಧಕ್ಕಾಗಿ ನ್ಯಾಯಾಲಯವು ಅವನು ಸಂಪಾದಿಸಿದ ಎಲ್ಲ ಆಸ್ತಿಯನ್ನು ದಂಡದ ರೂಪದಲ್ಲಿ ಮುಟ್ಟುಗೋಲು ಹಾಕಿಕೊಂಡು ಸೇವಾಸಂಸ್ಥೆಗಳಿಗೆ ಕೊಡಲು ಸರಕಾರಕ್ಕೆ ಆದೇಶಿಸಿದ್ದರೆ ಏನು ಮಾಡುತ್ತಿದ್ದಿರಿ ಎಂದು ಕೇಳಿದ್ದಾರೆ. ಅವನು ಈ ದಾನದಿಂದ ಖ್ಯಾತಿಯನ್ನು ಪಡೆಯಲು ಈಗ ಬದುಕಿ ಉಳಿದಿಲ್ಲ. ತನ್ನ ತಪ್ಪಿಗಾಗಿ ಪಶ್ಚಾತ್ತಾಪದಿಂದ ಅವನು ಹೀಗೆ ದಾನ ಮಾಡಲು ಬಯಸಿದ್ದಿರಬಹುದು. ಆದಕಾರಣ ಅವನು ದಾನಮಾಡಿದ ಹಣವನ್ನು ಸೇವಾಸಂಸ್ಥೆಗಳು ಪಡೆದು ಒಳ್ಳೆಯ ಕಾರ್ಯಗಳಿಗೆ ಬಳಸುವುದರಲ್ಲಿ ಯಾವ ತಪ್ಪೂ ಇಲ್ಲ ಎಂದು ಇನ್ನು ಕೆಲವರು ಪ್ರತಿಕ್ರಿಯಿಸಿದ್ದಾರೆ. ಇಂತಹ ಹಣವನ್ನು 'ದಾನ' ಎನ್ನುವುದಕ್ಕಿಂತ 'ದಂಡ' ಎಂದು ಪರಿಭಾವಿಸಿ ಪಡೆಯುವುದರಲ್ಲಿ ತಪ್ಪಿಲ್ಲವೆಂದು ಮತ್ತೆ ಕೆಲವರ ಅಂಬೋಣ.



ಇನ್ನೊಂದು ಪ್ರಕರಣ. ಕುಡಿತದ ಅಮಲಿನಲ್ಲಿ ಕಾರು ಓಡಿಸುತ್ತಿದ್ದ ಒಬ್ಬ ಯುವಕ ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೆ ಈಡಾದ. ಅವನ ತಾಯಿಗೆ ಮದ್ಯ ತಯಾರಿಸುವ ಕಂಪನಿಯು ಎಷ್ಟೋ ಲಕ್ಷ ಪರಿಹಾರ ಧನವನ್ನು ಘೋಷಿಸಿತು. ಮದ್ಯದ ಕಾರಣಕ್ಕಾಗಿ ತನ್ನ ಮಗ ಸತ್ತಿದ್ದಾನೆಂದು ಗೊತ್ತಿದ್ದೂ ಆ ಯುವಕನ ತಾಯಿಯು ಮದ್ಯ ತಯಾರಿಸುವ ಕಂಪನಿಯೇ ಕೊಡಮಾಡಿದ ಪರಿಹಾರ ಧನವನ್ನು ಪಡೆಯಬಹುದೇ? ಅದನ್ನು ನಿರಾಕರಿಸುವುದರಿಂದ ಸತ್ತ ಮಗನೇನೂ ಎದ್ದು ಬರುವುದಿಲ್ಲ. ದುಡಿಯುವ ಮಗ ಇಲ್ಲವಾದ್ದರಿಂದ ತಾಯಿ ತನ್ನ ಜೀವನ ನಿರ್ವಹಣೆಗಾಗಿ ತೆಗೆದುಕೊಂಡರೆ ತಪ್ಪೇನು? ಎಂದು ವ್ಯಾವಹಾರಿಕವಾಗಿ ಆಲೋಚಿಸುವವರೂ ಇದ್ದಾರೆ.

ನಮ್ಮ ಅನುಭವಕ್ಕೆ ಬಂದ ಇಂಥದೇ ಒಂದು ಪ್ರಸಂಗ. 90 ರ ದಶಕದಲ್ಲಿ ನಾವು ನಡೆಸಿದ 'ಪಾನ ನಿಷೇಧ ಆಂದೋಲನ'ವು ತೀವ್ರ ಗತಿಯಲ್ಲಿ ಸಾಗಿತ್ತು. ಆ ಸಂದರ್ಭದಲ್ಲಿ ನಮ್ಮ ಮಠದ ವಾರ್ಷಿಕ ಸಮಾರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವದ ಸ್ಮರಣ ಸಂಚಿಕೆಗೆ ಅನೇಕ 'ಬಾರ್ ಅಂಡ್ ರೆಸ್ಟೋರೆಂಟ್' ಮಾಲೀಕರಿಂದ ಜಾಹೀರಾತುಗಳು ಬರತೊಡಗಿದವು. ಅವರ ಚೆಕ್‌ಗಳನ್ನು ಸ್ವೀಕರಿಸಬೇಕೇ ಬೇಡವೇ ಎಂಬ ಸಂದಿಗ್ಧತೆ ಸಮಾರಂಭದ ಸಂಘಟರಿಗೆ ಉಂಟಾಯಿತು. ನಮ್ಮ ಗಮನಕ್ಕೆ ತಂದಾಗ ಪಾನ ನಿಷೇಧ ಆಂದೋಲನದ ಆಶಯದ ಹಿನ್ನೆಲೆಯಲ್ಲಿ ಮದ್ಯದ ಅಂಗಡಿಗಳಿಂದ ಬಂದ ಚೆಕ್‌ಗಳನ್ನು ಸ್ವೀಕರಿಸುವುದು ಸರಿಯಲ್ಲ, ಜಾಹೀರಾತುಗಳನ್ನು ಪ್ರಕಟಿಸುವುದೂ ಸರಿಯಲ್ಲ ಎಂಬ ನಮ್ಮ ನಿರ್ದೇಶನದ ಮೇರೆಗೆ ಸ್ಮರಣಸಂಚಿಕೆಯ ಸಂಪಾದಕರು ಆ ಎಲ್ಲ ಚೆಕ್ಕುಗಳನ್ನು ವಾಪಾಸ್ ಹಿಂತಿರುಗಿಸಿದರು. ಆ ಸಂದರ್ಭದಲ್ಲಿ ನಮಗೆ ನೆನಪಾದ ಬಸವಣ್ಣನವರ ವಚನವೆಂದರೆ:

**ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ!**
**ನಾಯ ಹಾಲು ನಾಯಿಮರಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ!**
**ನಮ್ಮ ಕೂಡಲ ಸಂಗನ ಶರಣರಿಗಲ್ಲದೆ**
**ಮಾಡುವ ಅರ್ಥ, ವ್ಯರ್ಥ ಕಂಡಯ್ಯಾ!**

ಪಾಪದ ಮೂಲದಿಂದ ಬಂದ ಹಣವನ್ನು ಒಳ್ಳೆಯ ಕಾರ್ಯಗಳಿಗೆ ಬಳಸುವುದು ನಿಷಿದ್ಧವೆಂದು ಈ ವಚನ ಬೋಧಿಸುತ್ತದೆಯೇ ಅಥವಾ ವಾಮಮಾರ್ಗದಿಂದ ಅಕ್ರಮಸಂಪತ್ತನ್ನು ಗಳಿಸಿದ ವ್ಯಕ್ತಿಯು ಒಳ್ಳೆಯ ಕಾರ್ಯಗಳನ್ನು ಮಾಡಲು ತನ್ನ ಸಂಪತ್ತನ್ನು ವಿನಿಯೋಗಿಸುವುದಿಲ್ಲವೆಂದು ಖಂಡಿಸುತ್ತದೆಯೇ? ಎಂತಹ ಹಣವನ್ನು ಸ್ವೀಕರಿಸಬಾರದು ಎಂದು ದಾನ ಪಡೆಯುವವನ ಮನೋಭಾವನೆಯನ್ನು ಇಲ್ಲಿ ಬಸವಣ್ಣನವರು ವಿವೇಚಿಸಿಲ್ಲ. ಬದಲಾಗಿ ಪಾಪದ

ಮೂಲದಿಂದ ಹಣ ಗಳಿಸುವ ವ್ಯಕ್ತಿಯ ಮನಃಸ್ಥಿತಿಯನ್ನು ಇಲ್ಲಿ ವಿವೇಚಿಸಿದ್ದಾರೆ. ತನ್ನ ಹಣವನ್ನು ಅವನು ಕೆಟ್ಟ ಕೆಲಸಗಳಿಗೆ ಬಳಸುವಷ್ಟು ಧಾರಾಳವಾಗಿ ಒಳ್ಳೆಯ ಕಾರ್ಯಕ್ಕೆ ಖರ್ಚು ಮಾಡುವುದಿಲ್ಲ ಎಂದು ಇದರ ಅರ್ಥ. ಬಸವಣ್ಣನವರ ಈ ವಚನದ ಆಶಯವನ್ನು ಸರ್ವಜ್ಞನ ಈ ಮುಂದಿನ ತ್ರಿಪದಿಯಲ್ಲಿ ಸ್ಫುಟವಾಗಿ ಕಾಣಬಹುದು:

**ಮಾನವರ ದುರ್ಗುಣವನೇನೆಂದು ಬಣ್ಣಿಸಲಿ**
**ದಾನಗೈ ಎನಲು ಕನಲುವರು, ದಂಡವ**
**ಮೌನದಿಂದೀಯುವರು ಸರ್ವಜ್ಞ !**

ಬಸವಣ್ಣನವರು "ನಮ್ಮ ಕೂಡಲ ಸಂಗನ ಶರಣರಿಗಲ್ಲದೆ ಮಾಡುವ ಅರ್ಥ, ವ್ಯರ್ಥ ಕಂಡಯ್ಯಾ!" ಎಂದು ಹೇಳುವಾಗ ಸಮಾಜಕ್ಕೆ ನೀಡದ ಹಣ ವ್ಯರ್ಥವೆಂಬ ಭಾವವಿದೆಯೇ ಹೊರತು, ನೀಡಬಾರದು ಅಥವಾ ಸ್ವೀಕರಿಸಬಾರದು ಎಂಬ ನಿಷೇಧವಿಲ್ಲ. ಆ ನಿಷೇಧವಿರುವುದು ಬಸವಣ್ಣನವರ ಈ ವಚನದಲ್ಲಿ ಅಲ್ಲ; ನುಲಿಯ ಚಂದಯ್ಯನವರ ಈ ಮುಂದಿನ ವಚನದಲ್ಲಿ:

**ಕಾರೆಯ ಸೊಪ್ಪಾದರೂ, ಕಾಯಕದಿಂದ ಬಂದುದು**
**ಲಿಂಗಕ್ಕರ್ಪಿತವಲ್ಲದೆ, ದುರಾಸೆಯಿಂ ಬಂದುದು ಅನರ್ಪಿತ**
**ಇದು ಕಾರಣ ಸತ್ಯಶುದ್ಧ ಕಾಯಕದ ನಿತ್ಯದ್ರವ್ಯ**
**ಚಂದೇಶ್ವರಲಿಂಗಕ್ಕೆ ನೈವೇದ್ಯ!**

ಪ್ರಾಮಾಣಿಕ ಸಂಪಾದನೆಯಿಂದ ಬಂದ ಹಣ ಮಾತ್ರ ದಾನ/ದಾಸೋಹಕ್ಕೆ ಯೋಗ್ಯವೇ ಹೊರತು ವಂಚನೆಯಿಂದ ಗಳಿಸಿದ ಹಣ ಅಲ್ಲ. ಒಬ್ಬ ತನ್ನ ಅಕ್ರಮಸಂಪಾದನೆಯನ್ನು ಒಳ್ಳೆಯ ಕಾರ್ಯಗಳಿಗೆ ಕೊಡಲು ಮನಸ್ಸು ಮಾಡಿದರೆ, ಮನಸ್ಸು ಮಾಡಿಯೂ ಸಹ ವಾಮಮಾರ್ಗದಲ್ಲಿ ಗಳಿಸುವುದನ್ನು ಬಿಡದೆ ಮುಂದುವರಿಸಿದರೆ ಅಂತಹವನ ಹಣವನ್ನು ಒಳ್ಳೆಯ ಕೆಲಸ ಮಾಡುವವರು ಬಳಕೆ ಮಾಡಿಕೊಳ್ಳಬಹುದೇ? ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ. ಮಠ-ಮಂದಿರಗಳಿಗೆ, ತಿರುಪತಿ ತಿಮ್ಮಪ್ಪನ ಹುಂಡಿಗೆ ಬೀಳುವ ಎಲ್ಲ ಕಾಣಿಕೆಯೂ ಭಕ್ತರು ಧರ್ಮಬದ್ಧವಾಗಿ ದುಡಿದ ಹಣವೆಂದು ಹೇಳಲು ಬರುವುದಿಲ್ಲ. ಶ್ರಮದ ಹಣವೂ ಇರಬಹುದು, ಕಪ್ಪು ಹಣವೂ ಇರಬಹುದು. ಆದರೆ ತಿರುಪತಿಯಿಂದ ಪ್ರಸಾದರೂಪವಾಗಿ ತಂದ ಲಾಡು ಕಪ್ಪು ಹಣದ ಮೂಲದಿಂದ ಬಂದಿದ್ದೆಂದು ಯಾರೂ ನಿರಾಕರಿಸುವುದಿಲ್ಲ.

ಋಜುಮಾರ್ಗದಲ್ಲಿ ಹಣ ಸಂಪಾದನೆ ಮಾಡುವುದು ಸುಲಭವಲ್ಲ. ಅದಕ್ಕೇ ಅನೇಕರು ಅಡ್ಡದಾರಿ ಹಿಡಿಯುತ್ತಾರೆ. ಪಾಪದ ಹಣವನ್ನು ಮುಟ್ಟಬಾರದು ಎಂಬ ನಿರಾಕರಣೆಯ ಹಿಂದೆ ವಾಮಮಾರ್ಗ ಅನುಸರಿಸುವ ವ್ಯಕ್ತಿಯ ಮನಃಪರಿವರ್ತನೆ ಮಾಡಿ ಸರಿದಾರಿಗೆ ತರಬೇಕೆಂಬ ಸದಾಶಯವಿದೆಯೇ ಹೊರತು ಅವನನ್ನು ಹಂಗಿಸುವ ದುರುದ್ದೇಶವಿಲ್ಲ. ಅವನ ಮನಃಪರಿವರ್ತನೆಯಾಗಿ ತನ್ನ ಅಕ್ರಮ ದಾರಿಯನ್ನು ಬಿಡುವುದಾದರೆ ಅವನ ದಾನವನ್ನು ಸ್ವೀಕರಿಸುವುದರಲ್ಲಿ ತಪ್ಪಿಲ್ಲ, ಆಗ ಅದು 'ಅಕ್ರಮ ಸಕ್ರಮ'ವಾಗುತ್ತದೆ. ಆದರೆ ಇದೊಂದು ಅತಿ ಸೂಕ್ಷ್ಮವಾದ ವಿಚಾರ. ಯಾರೇ ಹಣವನ್ನು ದಾನ ನೀಡಲಿ, ಅದು ಸಕ್ರಮವಾದ ಹಣವೇ, ಅಕ್ರಮ ಸಂಪಾದನೆಯೇ ಎಂದು ಕೇಳಲು ಬರುವುದಿಲ್ಲ. ಅದನ್ನು ನಿರ್ಧರಿಸುವುದು ವರ್ಷಕ್ಕೊಮ್ಮೆ ಲೆಕ್ಕಪತ್ರಗಳನ್ನು ಆಡಿಟ್ ಮಾಡುವ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಸಾಧ್ಯವಿಲ್ಲ. ನಿತ್ಯ ವ್ಯವಹರಿಸುವ ವ್ಯಕ್ತಿಯ ಅಂತಃಸಾಕ್ಷಿಯೇ ನಿಜವಾದ Internal Auditor!

1.3.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ